ಸಾಕ್ಷಿಯನ್ನು ದಿನಾಂಕಃ-**13-09-2024**ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ 3ನೇ ಎದುರುದಾರರ ಪರ ವಕೀಲರಿಂದಃ-**

ನಾನು ದ್ವಿತೀಯ ಪಿಯುಸಿ ಓದಿದ್ದೇನೆ. ಅಪಘಾತವು ವಾಹನ ಸಂಖ್ಯೆಃ ಕೆಎ-25/ ಎಬಿ-6116 ನೇದ್ದರ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿ. ನಾನು ಚಾಲನೆ ಮಾಡುತ್ತಿದ್ದಂತಹ ದ್ವಿಚಕ್ರ ವಾಹನದ ಮಾಲಿಕ ನಾನೆ. ನನಗೆ ದ್ವಿಚಕ್ರ ವಾಹನ ನಡೆಸಲು ಚಾಲನಾ ಪರವಾನಿಗೆ ಇದ್ದು ಅದನ್ನು ಹಾಜರುಪಡಿಸಿದ್ದೇನೆ. ನಾನೇ ವಾಹನದ ಮಾಲಿಕನಾಗಿದ್ದರಿಂದ 3ನೇ ಎದುರುದಾರರು ಪರಿಹಾರ ಧನ ಕೊಡಲು ಭಾದ್ಯಸ್ಥರಲ್ಲ ಅನ್ನುವುದು ಸರಿಯಲ್ಲ. ನಮ್ಮ ತಂದೆ ಚಾಲಕ ಅಂತಾ ಕೆಲಸ ಮಾಡುತ್ತಿದ್ದು, ಕಾರನ್ನು ಬಾಡಿಗೆ ಓಡಿಸುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಈಗ ಆರೋಗ್ಯ ಸರಿ ಇಲ್ಲದ್ದರಿಂದ ಅವರು ಚಾಲನೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಮನೆತನ ನಮ್ಮ ತಂದೆಯ ಆದಾಯದ ಮೇಲೆ ನಡೆಯುತ್ತಿದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ನಿರ್ವಹಣೆಯನ್ನು ನಾನೇ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನಾನು ನ್ಯಾಯಾಲಯಕ್ಕೆ ರಿಕ್ಷಾದಲ್ಲಿ ಬಂದಿದ್ದೇನೆ. ನ್ಯಾಯಾಲಯದ ಒಳಗೆ ಯಾರ ಸಹಾಯ ಇಲ್ಲದೇ ನಡೆದುಕೊಂಡು ಬಂದಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ನನಗೆ ನಡೆದಾಡಲು ಮತ್ತು ಕುಳಿತುಕೊಳ್ಳಲು ಬೇರೆಯವರ ಸಹಾಯ ಬೇಕು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪ್ರೀಮಿಯಮ್ ತುಂಬದೇ ಇರುವುದರಿಂದ 3ನೇ ಎದುರುದಾರರು ನನಗೆ ಪರಿಹಾರ ಧನ ಕೊಡಲು ಭಾದ್ಯಸ್ಥರಲ್ಲ ಅನ್ನುವುದು ಸರಿಯಲ್ಲ.

**ಮರುವಿಚಾರಣೆಃ- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಸದಸ್ಯರು ಮೋ.ವಾ.ಅ. ಮಂಡಳಿ-5,
ಜಮಖಂಡಿ.